



ಬಡವರಿಗೆ ಅನಂತ ಬಯಲೇ ಗತಿ

ಮಾಡಿದ ಹೆಂಗಸರೂ ಅರ್ಧಕ್ಕೆ ಕೈಚೆಲ್ಲಿರುವುದೂ ಇದೆ. ಕೆಲವು ಕಡೆಗಳಲ್ಲಿ ಶೌಚಾಲಯ ಕಟ್ಟಲು ಜಾಗದ ಸಮಸ್ಯೆ. ಇನ್ನು ಬಯಲುಸೀಮೆಯ ಕೆಲವು ಊರುಗಳಲ್ಲಿ ಕುಡಿಯುವ ನೀರಿಗೇ ಬರ. ಬಕೆಟ್‌ಗಟ್ಟಲೆ ನೀರು ಬೇಕಾಗುವ ಶೌಚಾಲಯಕ್ಕಿಂತ  ಚೊಂಬು ನೀರಿನಲ್ಲಿ ಮುಗಿಸಬಹುದಾದ ಬಯಲು ಶೌಚವೇ ವಾಸಿ ಎನ್ನಿಸುತ್ತದೆ. ಶೌಚಾಲಯ ಕಟ್ಟುವುದರಿಂದ ಹಿಡಿದು ಅದರ ನಿರ್ವಹಣೆಯವರೆಗಿನ ಸಮಸ್ಯೆಗಳ ಮುಂದೆ ಬಯಲು ಶೌಚದಿಂದ ಹುಟ್ಟುವ ಅನಾರೋಗ್ಯದ ಸಮಸ್ಯೆ ನಗಣ್ಯ ಎನ್ನಿಸಿಬಿಡುತ್ತದೆ.

ಚನ್ನಗಿರಿ ಸಮೀಪದ ಇನ್ನೊಂದು ಊರು ನವಿಲೇಹಾಳ್. ರಸ್ತೆಯಿಂದ ಮೂರು ನಾಲ್ಕು ಅಡಿಗಳ ಅಂತರದಲ್ಲಿಯೇ ಒಂದಕ್ಕೊಂದು ಅಂಟಿ ನಿಂತ ಮನೆಗಳು. ಎದುರಿಗೆ ಹರಿಯುವ ಗಟಾರ. ಹಿಂಭಾಗದಲ್ಲಿ ಮತ್ತೆ ಮನೆಗಳು. ಶೌಚಾಲಯ ಕಟ್ಟುವುದೆಲ್ಲಿ? ಮನೆಯೊಂದರ ಹೊರಕೋಣೆಯಲ್ಲಿ ಗುಂಡಿ ತೋಡಿ ಅರ್ಧಕ್ಕೆ ನಿಲ್ಲಿಸಿ, ಅದರೊಳಗೆ ತೆಂಗಿನ ಹೆಡೆ, ಕಟ್ಟಿಗೆ ಹಾಕಿದ್ದು ಕಾಣಿಸಿತು.

'ನಮ್ಮ ಮಹಿಳಾ ಸಂಘದಾಗೆ ಹತ್ ಸಾವ್ರ ಸಾಲ ತಗಂಡೆ. ಅದ್ರಾಗನೆ ನಮ್ಮನಿಯೋರು ಕುಡಿಯಕ್ಕೆ ಮಾಡಿದ್ದ ಸಾಲ ತೀರ್ಸಾಕೆ ಆರು ಸಾವ್ರ ತಗಂಡ್ರು..! ವಾರ ವಾರ ಕಟ್ಟಿ, ಈಗ ಸಂಘದ ಸಾಲ ತೀರಾಕ ಬಂದೈತಿ. ಹೊಸ ಸಾಲ ತಗಂಡು ಕಟ್ಟಿ ಮುಗಿಸಬೇಕ್ರಿ' ಎಂದು ರತ್ನಮ್ಮ ವಿವರಿಸಿದಳು. ಆಕೆಯ ಎದುರು ಮನೆಯಾತ 'ಸರ್ಕಾರ ದುಡ್ಡು ಕೊಡದು ಕಟ್ಟಿಮುಗಿಸಿದ ಮ್ಯಾಗ. ಈಗ ಕಟ್ಟಿಸಾಕ ಸಿಮೆಂಟು, ಇಟ್ಟಿಗೆ ತರಕೆ ಎಲ್ಲಿಂದ ದುಡ್ಡು ತರದು, ಕೂಲಿ ಕೆಲಸ ಮಾಡದು ನಾನು, ಮೂರು ಜನ ಹೆಣ್ಣುಮಕ್ಕಳ ಮದುವಿ ಮಾಡಬೇಕು, ಮನಿಗಿ ದುಡಿದು ತರಾ ಗಂಡಸುಮಕ್ಕಳೂ ಇಲ್ಲ, ಇರೋ ಅರ್ಧ ಎಕರೆಯಲ್ಲಿ ಬೆಳೆದಿದ್ದು ಊಟಕ್ಕೇ ಸಾಲಂಗಿಲ್ಲ' ಎಂದು ತನ್ನ ಅಸಹಾಯಕತೆಯನ್ನು ಬೇರೆ ಬೇರೆ ಧ್ವನಿಯಲ್ಲಿ ತೋಡಿಕೊಂಡ.

ಆ ಊರಿನಲ್ಲಿ ಚೊಂಬು ತಗಂಡು ಹೋಗಬೇಕು ಎಂದರೆ ಸುಮಾರು ಒಂದು ಮೈಲು ದೂರವಾದ್ರೂ ಹೋಗಬೇಕು! ಹುಷಾರಿಲ್ಲದಿದ್ದಾಗ ಹಗಲು ಹೊತ್ತಿನಲ್ಲಿ ಇವರುಗಳು ಎಲ್ಲಿ ಹೋಗ್ತಾರಪ್ಪ ಎಂದು ನನಗೆ ದಿಗಿಲಾಯಿತು. ಪ್ರೇರಕಳಾಗಿ ಕೆಲಸ ಮಾಡುತ್ತಿದ್ದ ಸುನಿತಾಗೆ ಕೇಳಿದೆ. 'ಭಾಳಾ ಹಿಂಸೆ ರೀ. ನಾನು ಹೋದ ವರ್ಸ ಇದೇ ಯೋಜನೆದಾಗ ಕಟ್ಟಿಸಿಕೊಂಡೀನ್ರಿ. ಹೊಟ್ಟೆ ಸರೀಗಿಲ್ಲದಿದ್ದಾಗ ಹೋಗಬೇಕು ಅಂದ್ರೂನೂ ಕತ್ಲಾಗೂತನಾ ತಡ್ಡಬೇಕಿತ್ರಿ. ಬಾಣಂತನದಾಗ ಎಷ್ಟು ಕಷ್ಟ ಆಗತೈತೆ ಅಂದ್ರೆ ಹೇಳಕ್ಕೆ ಆಗೊಲ್ದು ಮೇಡಂ. ಈಗ ವರ್ಸಾತು, ನಾ ನನ್ ಮನ್ಯಾಗ ಭಾಳಾ ಮರ್ವಾದಿಯಿಂದ ಹೋಗ್ತೀನ್ರಿ. ಮದ್ಲಿಗಿ ಸೀರೆ ಎತ್ತಿ ಕೂರದು ಅಂದ್ರ ಮರ್ವಾದಿನೆ ಬೀದಿ ಪಕ್ಕ ಕಳಚಿಟ್ಟು ಕೂತಂಗ ಅನ್ನಿಸತಿತ್ರಿ..' ಎನ್ನುತ್ತಲೇ, ಈಗ ಎಷ್ಟು ನಿರುಮ್ಮಳವಾಗಿದ್ದೇನೆ ಎಂದು ನಕ್ಕಳು.

ಗಂಗಾವತಿಯ ಬಳಿಯ ಹಳ್ಳಿಯೊಂದರಲ್ಲಿ ಬೇರೆಯಾಗಿದ್ದ ಅತ್ತೆ–ಸೊಸೆ ಶೌಚಾಲಯವನ್ನು ಮಾತ್ರ ಅಕ್ಕಪಕ್ಕದಲ್ಲಿ ಕಟ್ಟುವುದು ಅಂತ ಸಾಲ ತೆಗೆದು, ಕಟ್ಟಲು ಶುರು ಮಾಡಿ, ಆ ಸಾಲದಲ್ಲಿ ಅರ್ಧಭಾಗವನ್ನು ಮನೆ ಖರ್ಚಿಗೆ ಬಳಸಿಕೊಂಡು, ಈಗ ದುಡ್ಡಿಲ್ಲದೇ ಕೈಚೆಲ್ಲಿ ಕೂತಿದ್ದರು. ಗಂಗಾವತಿಯ ಇನ್ನೊಂದು ಹಳ್ಳಿಯಲ್ಲಿ ಗುಂಡಿ ತೋಡಿಸಿ, ಅರ್ಧಕ್ಕೆ ಕೈಬಿಟ್ಟದ್ದನ್ನು ತೋರಿಸುತ್ತ, ಮನೆಯಾಕೆ 'ಹೊರಗಡಿಕೆ ಹೋಗೋದು ಕಷ್ಟ ಆಗತ್ತೈತೆ, ಏನು ಮಾಡದು, ಗಂಡಸ್ರು ಕಟ್ಟಸಬೇಕಲ್ಲ' ಎನ್ನುತ್ತಲೇ 'ಮುಂದಿನ ತಿಂಗಳು ಮಗಳು ಹಡೆಯಲಿಕ್ಕೆ ಬರುವವಳಿದ್ದಾಳೆ, ಅಷ್ಟರೊಳಗೆ ಮುಗಿಸಿಬಿಡಬೇಕು' ಎಂದು ಒಂದು ಬಗೆಯ ದಣಿದ ಧ್ವನಿಯಲ್ಲಿ ಹೇಳಿದಳು.

ಅವರ ಪಕ್ಕದ ಮನೆಯಾತ 'ಸರ್ಕಾರದ ಸ್ಕೀಮೈತೆ, ಕಟ್ಟಿಸಿಕೊಂಡರೆ ದುಡ್ಡು ಬರುತ್ತೆ ಅಂತ ಗೊತ್ತು, ಆದ್ರೆ ಕಟ್ಟಸಾಕ ಕಾಸು ಬೇಕಲ್ಲ ಮೊದ್ಲಿಗಿ, ಎಲ್ಲಿಂದ ತರದು? ಏಳು ಜನ ಮಕ್ಕಳು, ಅದ್ರಾಗೆ ಐದು ಹೆಣ್ಣು, ಇನ್ನೂ ಮೂರು ಜನ್ರನ್ನ ಮದುವೆ ಮಾಡಬೇಕು, ಎಲ್ಲಿಂದ ಕಾಸು ತರಾದು...' ಎಂದು ನನ್ನನ್ನೇ ಪ್ರಶ್ನಿಸಿದ.

ಮತ್ತೆ ನಾಲ್ಕು ದಿನ ಆಂಧ್ರದ ಚಿತ್ತೂರು, ಅನಂತಪುರ ಸಮೀಕ್ಷೆ. ಜೊತೆಗಿದ್ದ ಸಹೋದ್ಯೋಗಿ ಸುಶ್ಮಿತಾ ಮಾಡುತ್ತಿದ್ದ ಸಂದರ್ಶನಗಳು ನನಗೆ ಬರುತ್ತಿದ್ದ ಅರೆಬರೆ ತೆಲುಗಿನಿಂದಲೇ ಸಾಕಷ್ಟು ಚೆನ್ನಾಗಿ ಅರ್ಥವಾಗುತ್ತಿತ್ತು. ಇಲ್ಲಿಯೂ ಹೆಚ್ಚು ಕಡಿಮೆ ಅವೇ ಕಥೆಗಳು. ಆದರೆ ಆಂಧ್ರ ಸರ್ಕಾರ ಎರಡು ಕಂತಿನಲ್ಲಿ ಹಣ ಕೊಡುತ್ತಿತ್ತು, ಜನರು ಅರ್ಧ ಕಟ್ಟಿದಾಗ ಅರ್ಧ ಹಣ, ಆಮೇಲೆ ಪೂರ್ಣ ಕಟ್ಟಿದ ಮೇಲೆ ಪೂರ್ಣ ಪ್ರೋತ್ಸಾಹಧನ, ಹೀಗಾಗಿ ಅಲ್ಲಿ ಅರ್ಧ ಕಟ್ಟಿ, ದುಡ್ಡಿಲ್ಲ ಎಂದು ಕೈಬಿಟ್ಟವರು ಇರಲಿಲ್ಲ.

ಕೊನೆಯ ದಿನ ಅನಂತಪುರದ ರಾಜಂಪಳ್ಳಿ ಎಂಬ ಹಳ್ಳಿಯೊಂದರಲ್ಲಿ ಜನರನ್ನು ಮಾತಾಡಿಸುತ್ತಿದ್ದೆವು. ಊರ ಬೀದಿಯ ತುದಿಯ ಮನೆಯೊಂದರಲ್ಲಿದ್ದ ಫಾತಿಮಾಗೆ 'ಆಪ್ ಕಿದರ್ ಜಾತೇ ಹೈ' ಎಂದು ಕೇಳಿದಾಗ ಆಕೆ ಕೈತೋರಿದ ಕಡೆ ನೋಡುತ್ತಿದ್ದಂತೆ ನನಗೆ ತಟ್ಟನೆ ಇಲ್ಲಿಗೆ ಬಂದ ಮೊದಲ ರಾತ್ರಿ ನೆನಪಾಯಿತು.

ಚಿತ್ತೂರಿನಿಂದ ಅನಂತಪುರಕ್ಕೆ ಬರುವ ಮೊದಲು ಯಾವ ಬಗೆಯ ಹೋಟೆಲ್‌ಗಳಿವೆ ಎಂದು ಗೂಗಲ್ ಮಾಡಿ, ಯಾವ ಹೋಟೆಲ್‌ನ ರಿವ್ಯೂನಲ್ಲಿಯೂ ಟಾಯ್ಲೆಟ್ ಹೇಗಿದೆ ಎಂಬ ಬಗ್ಗೆ ಒಂದೇ ಒಂದು ಸಾಲನ್ನೂ ಯಾರೂ  ಬರೆಯದಿದ್ದರ ಬಗ್ಗೆ ಇಬ್ರೂ ಬೈದುಕೊಂಡು, ಕೊನೆಗೆ ಎರಡು ಹೋಟೆಲ್‌ಗಳನ್ನು ಶಾರ್ಟ್‌ಲಿಸ್ಟ್ ಮಾಡಿಟ್ಟುಕೊಂಡಿದ್ದೆವು. ನಾವು ಅನಂತ ಪುರ ತಲುಪುವಷ್ಟರಲ್ಲಿ ರಾತ್ರಿ ಹನ್ನೊಂದೂವರೆ. ಎರಡೂ ಹೋಟೆಲ್‌ಗಳಲ್ಲಿ ರೂಂ ನೋಡುತ್ತೇವೆ ಎಂದು, ಬಾತ್‌ರೂಮಿನಲ್ಲಿ ಇಣುಕಿ, ಕಮೋಡ್ ನೋಡಿ, ಪರವಾಗಿಲ್ಲ ಎನ್ನಿಸಿದ ಹೋಟೆಲ್‌ನಲ್ಲಿ  ಚೆಕ್ ಇನ್ ಆಗಿದ್ದೆವು.

ಫಾತಿಮಾ  'ಉದರ್ ಜಾತೇ ಹೈ' ಎಂದು ಕೈತೋರಿದ ಕಡೆಗೆ ನಾನು ಸುಶ್ಮಿತಾ ನೋಡಿದರೆ ಅನಂತ ಬಯಲೊಂದು ಕಾಣುತ್ತಿತ್ತು. ಮರೆಮಾಡಿ ಕೊಳ್ಳಲಿಕ್ಕೆ ಮರಗಳಿರಲಿ, ಬಳ್ಳಾರಿ ಮುಳ್ಳುಕಂಟಿಗಳೂ ಅಲ್ಲೆಲ್ಲೂ ಕಾಣಲಿಲ್ಲ. ಅಪರಾತ್ರಿಯಲ್ಲಿಯೂ, ಹೋಟಲಿನಲ್ಲಿ ಟಾಯ್ಲೆಟ್ ಹೇಗಿದೆ ಎಂದು ಪರೀಕ್ಷಿಸಿ, ಚೆಕ್‌ಇನ್ ಆಗುವ ಸವಲತ್ತುಳ್ಳ ನಾವಿಬ್ಬರೂ ಬಯಲು ಶೌಚಾಲಯದ ಕಷ್ಟಗಳನ್ನು ಅರ್ಥ ಮಾಡಿಕೊಳ್ಳಲು ಅಲ್ಲಿ ನಿಂತಿದ್ದೆವು. ನಮ್ಮೆದುರಿಗೆ ಇನ್ನೂ ಕೋಟಿಗಟ್ಟಲೆ ಸಂಖ್ಯೆಯ ನಮ್ಮವರು ಪ್ರತೀದಿನದ ದೇಹಬಾಧೆ ತೀರಿಸಿಕೊಳ್ಳಲು ಹೋಗುವ, ಫಾತಿಮಾ ಕೈ ತೋರಿಸಿದ ಬಟಾಬಯಲು ಉದ್ದಕ್ಕೆ, ಅಗಲಕ್ಕೆ ಮೈಚೆಲ್ಲಿಕೊಂಡು ಬಿಸಿಲಿನಲ್ಲಿ ಸುಸ್ತಾಗಿ ಮಲಗಿತ್ತು.